## ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 6** **ಪ್ರಥಮ ಭಾಷೆ : ಕನ್ನಡ** **ಮಾಹೆ : ಫೆಬ್ರವರಿ – 2022**

**ಗದ್ಯ ಭಾಗ : ಯಾಣ ಕುರಿತೊಂದು ಪತ್ರ**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಫೆಬ್ರವರಿ 1 ನೇ ವಾರ** | * ವಿವಿಧ ನಮೂನೆಯ ಉಭಯ ಕುಶಲೋಪರಿ ಪತ್ರ ಮತ್ತು ಪ್ರವಾಸ ಲೇಖನಗಳನ್ನು ಬರೆಯುವುದು. | * ಚಟುವಟಿಕೆ 1:<br>ಮಗುವು ನೋಡಿರುವ ಯಾವುದಾದರೊಂದು ಸುಂದರ ಸ್ಥಳದ ಬಗ್ಗೆ ವಿವರಿಸುವಂತೆ ಸಲಹೆ ನೀಡುವುದು.<br>* ಚಟುವಟಿಕೆ 2:<br>ನೋಡಿದ ಸ್ಥಳದ ಪರಿಚಯ ಮಾಡಿಸುವುದರ ಜೊತೆಗೆ ಬರೆಯುವಂತೆ ಸೂಚಿಸುವುದು.<br>* ಚಟುವಟಿಕೆ 3:<br>ವೈಯಕ್ತಿಕ ಪತ್ರ ಸಂಬೋಧನೆಗಳನ್ನು ನೆನಪಿಗೆ ತರಲು ಚಟುವಟಿಕೆ ನೀಡುವುದು.<br><br>ತಂದೆ – ತೀರ್ಥರೂಪು ರವರಿಗೆ<br>ತಾಯಿ – ಮಾತೃಶ್ರೀ ಯವರಿಗೆ<br>ಗುರುಗಳು – ಪೂಜ್ಯ ಗುರುಗಳಿಗೆ<br>ಚಿಕ್ಕಪ್ಪ, ದೊಡ್ಡಪ್ಪ, ಮಾವ – ತೀರ್ಥರೂಪು ಸಮಾನರಾದ<br>ಗೆಳೆಯ/ಗೆಳತಿ – ನಲ್ಮೆಯ, ಪ್ರೀತಿಯ<br>ಕಿರಿಯರಿಗೆ – ಚಿರಂಜೀವಿಗೆ | ಅವಲೋಕನ<br><br><br><br>ವೀಕ್ಷಣೆ<br><br><br>ಅವಲೋಕನ |

| ಕ್ರ.ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಶಿಕ್ಷಕರ ಮಾದರಿ ಓದು<br><br>* ಮಕ್ಕಳ ಓದು<br><br>* ಸಂಸ್ಕೃತ ಸಂಧಿಯ ವಿಧಗಳು.<br><br>* ಸವರ್ಣದೀರ್ಘ ಸಂಧಿ<br><br>* ಗುಣ ಸಂಧಿ | * 'ಯಾಣ ಕುರಿತೊಂದು ಪತ್ರ' ಗದ್ಯ ಪಾಠವನ್ನು ಶಿಕ್ಷಕರು ಸ್ಪಷ್ಟವಾಗಿ ಓದುತ್ತಾ ಹೊಸಪದಗಳ ಪರಿಚಯ ಮಾಡಿಸುವುದು.<br><br>* ಹೊಸ ಪದಗಳು ಮತ್ತು ಅರ್ಥವನ್ನು ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಬರೆಸುವುದು.<br>ಹೆಬ್ಬಂಡೆ, ಸಂದಿಗ್ಧ, ದಂತಕಥೆ, ಚಾರಣ<br><br>* ಸವರ್ಣದೀರ್ಘ ಸಂಧಿ * ವೃದ್ಧಿ ಸಂಧಿ<br>* ಗುಣಸಂಧಿ * ಯಣ್ ಸಂಧಿ<br><br>ಅ,ಆ + ಅ, ಆ = ಆ<br>ಇ.ಈ + ಇ. ಈ = ಈ → ಸವರ್ಣದೀರ್ಘ ಸಂಧಿ<br>ಉ,ಊ + ಉ, ಊ = ಊ<br><br>ಅ,ಆ + ಇ, ಈ = ಏ<br>ಅ,ಆ + ಉ, ಊ = ಓ → ಗುಣಸಂಧಿ<br>ಅ,ಆ + ಋ = ಅರ್ | ಅಭ್ಯಾಸ ಹಾಳೆ<br><br>ಅಭ್ಯಾಸ ಹಾಳೆ |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಸಂಧಿಪದಗಳ ಉದಾಹರಣೆಗಳ ಪರಿಚಯ.<br><br><br><br>* ಅಭ್ಯಾಸ ಚಟುವಟಿಕೆ. | * ಸುರ + ಅಸುರ = ಸುರಾಸುರ<br>(ಅ) + (ಅ) = (ಆ)<br><br>*ಗುಣ + ಉದಯ = ಗುಣೋದಯ<br>(ಅ) + (ಉ) = (ಓ)<br><br>* ಸಿರಿ ಕನ್ನಡ – 6 ಪುಟ ಸಂಖ್ಯೆ 52&53 ರಲ್ಲಿರುವ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಿ ಬರೆಸುವುದು. | ಅಭ್ಯಾಸದ ಹಾಳೆ<br><br><br><br><br>ಅವಲೋಕನ |

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಫೆಬ್ರವರಿ 2 ನೇ ವಾರ** | * ಪತ್ರಲೇಖನ<br><br><br>* ಮಾದರಿ ಅರ್ಜಿಪತ್ರ | * ಪತ್ರಲೇಖನದ ಹಂತಗಳನ್ನು ವಿವರಿಸಿ ಉದಾಹರಣೆಯೊಂದಿಗೆ ಹೇಳಿಕೊಡುತ್ತಾ ಸ್ಪಷ್ಟಪಡಿಸುವುದು.<br>(ಸಿರಿ ಕನ್ನಡ – 6 ಪುಟ ಸಂಖ್ಯೆ 55)<br><br>* ಮಕ್ಕಳು ಶಾಲೆಗೆ ಬರದೇ ಇರುವ ದಿನ ಬರೆಯುವ ರಜಾ ಅರ್ಜಿ ಬರೆಸಿ ತಪ್ಪುಗಳನ್ನು ತಿದ್ದುತ್ತಾ ಸರಿಯಾದ ಕ್ರಮವನ್ನು ಹೇಳಿಕೊಡುವುದು. | ವೀಕ್ಷಣೆ |

**ಯೋಜನೆ :**

* ನೀನು ನೋಡಿರುವ ಯಾವುದಾದರೊಂದು ಜಾತ್ರೆಯ ಕುರಿತು ನಿನ್ನ ಗೆಳೆಯ/ಗೆಳತಿಗೆ ಪತ್ರ ಬರೆ.
* ಸಂಧಿಯ ಅರ್ಥ, ಸಂಧಿಯ ವಿಧಗಳು ಹಾಗೂ ಕನ್ನಡ ಸಂಧಿಗಳು ಅವುಗಳಿಗೆ ಉದಾಹರಣೆಗಳನ್ನು ಬರೆಯಿರಿ.

**ಪರ್ಯಾಯ ಶೈಕ್ಷಣಿಕ ಯೋಜನೆ 2021–2022**

**ತರಗತಿ : 6** **ಪ್ರಥಮ ಭಾಷೆ : ಕನ್ನಡ** **ಮಾಹೆ : ಫೆಬ್ರವರಿ – 2022**

**ಪದ್ಯ ಭಾಗ : ಕಿತ್ತೂರ ಕೇಸರಿ**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಫೆಬ್ರವರಿ 3 ನೇ ವಾರ** | * ಕ್ಷೇತ್ರ : ಆಲಿಸುವುದು<br>* ವಿಷಯವನ್ನು ಆಲಿಸಿದ ಬಳಿಕ ಏಕೆ? ಹೇಗೆ? ಹಾಗಾದರೆ, ಹಾಗಾಗದಿದ್ದರೆ ಪ್ರಶ್ನೆಗಳಿಗೆ ಉತ್ತರಿಸುವುದು. | * ಚಟುವಟಿಕೆ 1:<br>ಕಥೆಯೊಂದನ್ನು ಹೇಳುತ್ತಾ ಕಥೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ತಯಾರಿಸಿಕೊಂಡು ಮಕ್ಕಳನ್ನು ಕೇಳಿ ಉತ್ತರ ಪಡೆಯುವುದು.<br>* ಚಟುವಟಿಕೆ 2:<br>ನಮ್ಮ ನಾಡಿಗಾಗಿ ಹೋರಾಡಿದ ವೀರ ಮಹಿಳೆಯರ ಪರಿಚಯ ಮಾಡಿಸುತ್ತಾ, ಅವರ ಭಾವಚಿತ್ರ ಪ್ರದರ್ಶಿಸುವುದು. | ವೀಕ್ಷಣೆ<br>ಅವಲೋಕನ |
| | | * ಪದ್ಯದ ಹಾಡುಗಾರಿಕೆ. | * ಕಿತ್ತೂರ ಕೇಸರಿ ಪದ್ಯವನ್ನು ಲಾವಣಿಯ ರೂಪದಲ್ಲಿ ಮಕ್ಕಳಿಗೆ ಹೇಳಿಕೊಡುವುದು. | ಅವಲೋಕನ |
| | | * ಮಕ್ಕಳ ಹಾಡುಗಾರಿಕೆ. | * ಗುಂಪುಗಳಲ್ಲಿ ಪದ್ಯವನ್ನು ಮಕ್ಕಳಿಂದ ಹಾಡಿಸುವುದು. | |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಕವಿ ಕೃತಿ ಪರಿಚಯ. | * **ಪರಗೊಂಡ ಗುರುಪಾದಪ್ಪ ಸಿದ್ದಾಪುರ**<br>ಕಾವ್ಯನಾಮ : ಪ.ಗು.ಸಿದ್ದಾಪುರ<br>ಜನನ : 01–06–1958<br>ಸ್ಥಳ : ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ತಾ॥ ದಾಶಾಳ ಗ್ರಾಮ<br>ತಂದೆ : ಗುರುಪಾದಪ್ಪ<br>ತಾಯಿ : ಯಮುನಾಬಾಯಿ<br>ವೃತ್ತಿ : ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕರು | ಅವಲೋಕನ |
| | | * ಪ್ರಾಸ ಪದಗಳು | * ಪದ್ಯದಲ್ಲಿನ ಪ್ರಾಸಪದಗಳನ್ನು ಮಕ್ಕಳಿಂದ ಹೇಳಿಸಿ, ಗುರುತು ಹಾಕಿಸಿ ಬರೆಸುವುದು. | ವೀಕ್ಷಣೆ |
| | | * ದೇಶೀಯ, ಅನ್ಯದೇಶೀಯ ಪದಗಳು | * ದೇಶೀಯ, ಅನ್ಯದೇಶೀಯ ಪದಗಳ ಅರ್ಥ ನೆನಪಿಸುವುದು. ಅನೇಕ ಉದಾಹರಣೆ ಪದಗಳ ಚಾರ್ಟ್ ಬಳಸುವುದು.<br>(ಸಿರಿ ಕನ್ನಡ – 6 ಪುಟ ಸಂಖ್ಯೆ 112) | ಅಭ್ಯಾಸದ ಹಾಳೆ |
| | | * ಅಭ್ಯಾಸ ಚಟುವಟಿಕೆ | * ಪದ್ಯದ ಕೊನೆಯಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಕ್ಕಳಿಂದ ಹೇಳಿಸುತ್ತಾ ಬರೆಸುವುದು. | ಅಭ್ಯಾಸದ ಹಾಳೆ |

**ಯೋಜನೆ :**

* ನಮ್ಮ ನಾಡಿನ ವೀರ ಮಹಿಳೆಯರ ಭಾವಚಿತ್ರ ಸಂಗ್ರಹಿಸಿ, ಮಾಹಿತಿ ಸಂಗ್ರಹಿಸಿ ಆಲ್ಬಂ ತಯಾರಿಸಿ.

# ಅಭ್ಯಾಸ ಹಾಳೆ – 1

ತರಗತಿ : 6 ಪಾಠ : ಯಾಣ ಕುರಿತೊಂದು ಪತ್ರ ಮಾಹೆ : ಫೆಬ್ರವರಿ – 2022

☞ ಕೆಳಗಿನ ಪದಗಳ ಅರ್ಥ ಬರೆಯಿರಿ :

1. ಗಗನ ಚುಂಬಿ – ________________
2. ಉತ್ಪತ್ತಿ – ____________________
3. ತಾಣ – ____________________
4. ಹೆಬ್ಬಂಡೆ – __________________

☞ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ.

1. ಇ–ಮೇಲ್ ತೆರೆಯಲು ________________ ಸಂಕೇತದ ಅಗತ್ಯವಿದೆ.
2. ಇ–ಮೇಲ್ ಎಂಬ ಪದದಲ್ಲಿ 'ಇ' ಎಂದರೆ ________________
3. 'ಯಾಣ' ದಕ್ಷಿಣ ಕನ್ನಡ ಜಿಲ್ಲೆಯ _______________ ತಾಲ್ಲೂಕಿಗೆ ಸೇರಿದೆ.

☞ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:

1. ಇ–ಮೇಲ್ ಎಂದರೇನು?
2. ನಿಮ್ಮ ಇ–ಮೇಲ್ ವಿಳಾಸ ಬರೆಯಿರಿ.
3. ಸಂಸ್ಕೃತ ಸಂಧಿಯ ವಿಧಗಳನ್ನು ಹೆಸರಿಸಿ.
4. ನಿಮ್ಮ ಶಾಲೆಯ ಮುಂದಿರುವ ವಿದ್ಯುತ್ ಕಂಬದ ದೀಪ ಹಾಳಾಗಿರುವುದನ್ನು ಸರಿಪಡಿಸಿಕೊಡಬೇಕೆಂದು ಕೋರಿ ಗ್ರಾಮ ಪಂಚಾಯ್ತಿಗೆ ಅರ್ಜಿ ಬರೆಯಿರಿ.

☞ ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರು ಬರೆಯಿರಿ:

1. ದೇವಾಲಯ =
2. ಶಿವಾಲಯ =
3. ಸುರಾಸುರ =
4. ಸಪ್ತರ್ಷಿ =
5. ಮಹೇಶ್ವರ =
6. ಭಸ್ಮಾಸುರ =
7. ಸ್ವಾತಂತ್ರ್ಯೋತ್ಸವ =
8. ಗಿರೀಶ =
9. ಧರಣೀಶ =
10. ಮಹೋತ್ಸವ =
11. ಚಂದ್ರೋದಯ =
12. ಸತೀಶ =
13. ಸೂರ್ಯೋದಯ =
14. ರವೀಂದ್ರ =
15. ಗುರೂಪದೇಶ =

☞ ಯೋಜನೆ :

* ಅಂಚೆ ಕಛೇರಿಯಲ್ಲಿ ಸಿಗುವ ವಿವಿಧ ಬಗೆಯ ಪತ್ರಗಳನ್ನು ಸಂಗ್ರಹಿಸಿ ಎ–4 ಹಾಳೆಗೆ ಅಂಟಿಸಿ.
* ನೀವು ನೋಡಿರುವ ಯಾವುದಾದರೊಂದು ಜಾತ್ರೆ ಕುರಿತು ನಿಮ್ಮ ಗೆಳೆಯ/ಗೆಳತಿ ಗೆ ಪತ್ರ ಬರೆಯಿರಿ.

## ಅಭ್ಯಾಸ ಹಾಳೆ – 1

ತರಗತಿ : 6 ಕಿತ್ತೂರ ಕೇಸರಿ ಮಾಹೆ : ಫೆಬ್ರವರಿ – 2022

☞ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ:

1. 'ಕಿತ್ತೂರ ಕೇಸರಿ' ಪದ್ಯವನ್ನು ಬರೆದ ಕವಿ ____________________
2. ಪ.ಗು.ಸಿದ್ದಾಪುರ ಅವರ ಪೂರ್ಣ ಹೆಸರು ____________________
3. 'ಕಿತ್ತೂರ ಕೇಸರಿ' ಪದ್ಯವನ್ನು ____________________________ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.
4. 'ದುರ್ಮತಿ' ಪದದ ಅರ್ಥ ______________________
5. 'ಸೆರೆಮನೆ' ಪದದ ಸಮಾನಾರ್ಥಕ ಪದಗಳು _____________ ______________
6. ಮಲ್ಲಸಜ್ಜನ ಕಿರಿಯ ರಾಣಿ ____________________
7. ರಾಣಿ ಚೆನ್ನಮ್ಮಳೊಡನೆ ಸಿಡಿದೆದ್ದ ಕಿಡಿಗಳು _______________ ________________
8. ನಮ್ಮ ಅನ್ನವನ್ನುಂಡು ಕೊಬ್ಬಿರುವವರು __________________
9. ಚೆನ್ನಮ್ಮಳು _______________ ವಿನ ಕೃಪೆಯಿಂದ ಸೈನ್ಯವನ್ನು ಕಟ್ಟಿದಳು.

☞ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

1. ವೀರ × _________________
2. ಕಿರಿಯ × _________________
3. ಸೋಲು × ________________
4. ನೋವು× _________________
5. ಧೈರ್ಯ × _________________

☞ ಕೆಳಗಿನ ಪದಗಳನ್ನು ದೇಶೀಯ ಹಾಗೂ ಅನ್ಯದೇಶೀಯ ಪದಗಳಾಗಿ ವಿಂಗಡಿಸಿ ಬರೆಯಿರಿ .
ಕದ, ಮಿತ್ರ, ಚೆನ್ನಾಗಿ, ಸೈಕಲ್, ಅನಾನಸು, ವಜಾ, ಬೆಲ್ಲ, ಸರದಾರ, ಮೂಡಣ, ಮರ, ಜರೂರು, ಆಟ, ಕಛೇರಿ, ಶಿಫಾರಸ್ಸು, ಮೇಜು, ಹುಲ್ಲು.

| ದೇಶೀಯ ಪದಗಳು | ಅನ್ಯದೇಶೀಯ ಪದಗಳು |
| --- | --- |
| | |

☞ 'ಕಿತ್ತೂರ ಕೇಸರಿ' ಪದ್ಯದಲ್ಲಿ ಕಾಣಸಿಗಬಹುದಾದ ಪ್ರಾಸ ಪದಗಳನ್ನು ಹುಡುಕಿ ಬರೆಯಿರಿ.

☞ ಯೋಜನೆ :

* ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ಝಾನ್ಸಿರಾಣೀ ಲಕ್ಷ್ಮೀಬಾಯಿ, ರಾಣಿ ಅಬ್ಬಕ್ಕ, ಬೆಳವಡಿ ಮಲ್ಲಮ್ಮ ಇಂತಹ ವೀರ ಮಹಿಳೆಯರ ಭಾವಚಿತ್ರ ಹಾಗೂ ಮಾಹಿತಿ ಸಂಗ್ರಹಿಸಿ ಆಲ್ಬಂ ತಯಾರಿಸಿ.